

## ಮಾಸದ ಕಸೂತಿ

ಕಲೆ– ಅಲಂಕಾರವೂ ಡಿಜಿಟಲೀಕರಣ ಆಗಿರುವ ಈ ಕಾಲದಲ್ಲೂ ಸಾಂಪ್ರದಾಯಕ ಕಸೂತಿ ನೆನಪಾಗುತ್ತವೆ. ವಿಶೇಷವಾಗಿ ಹಳ್ಳಿ ಮನೆಗಳಲ್ಲಿ ಜಗುಲಿಯ ಗೋಡೆಗಳು ಒಂದು ಕಾಲದಲ್ಲಿ ಸಾಂಪ್ರದಾಯಕ ಕಲೆ ಕಸೂತಿಗಳ ಪ್ರದರ್ಶನಕ್ಕೆ ಒಂದು ವೇದಿಕೆಯಾಗಿದ್ದವು. ಗೃಹಿಣಿಯರು ತಮ್ಮ ಕಸೂತಿ ಕಲಾಕೃತಿಗಳನ್ನು ಮನೆಯ ಗೋಡೆಗಳ ಮೇಲೆ ತೂಗುಹಾಕಿ, ಅವನ್ನು ಮನೆಗೆ ಬರುವ ಅತಿಥಿಗಳಿಗೆ ತೋರಿಸುತ್ತಿದ್ದ ಆ ಕಾಲ ಎಂದೋ ಹೋಗಿದೆ.

ಚಿತ್ರದಲ್ಲಿರುವುದು ಮಣಿ ಕಸೂತಿಯ ಬೀಸಣಿಕೆ. ಮದುವೆ ಸಂದರ್ಭದಲ್ಲಿ ವರೋಪಚಾರದಲ್ಲಿ ಇದನ್ನು ಬಳಕೆ ಮಾಡುವ ರೂಢಿ ಮಲೆನಾಡಿನ ಭಾಗದಲ್ಲಿ ಇತ್ತು. ಬದಲಾದ ಕಾಲದಲ್ಲಿ ಮದುವೆ ಕಲ್ಯಾಣ ಮಂಟಪದಲ್ಲಿ ನಡೆಯುವುದರಿಂದ ಇವು ಕಾಣಸಿಗುವುದಿಲ್ಲ. ಕೈ ಕಸೂತಿಗಳು ಸೂಕ್ಷ್ಮ ಕುಸುರಿ ನೇಯ್ಗೆಯಿಂದ ಗಮನ ಸೆಳೆಯುತ್ತವೆ.

—ಅರ್ಚನಾ ಬೊಮ್ನಳ್ಳಿ, ಶಿರಸಿ

## ಅಗ್ನಿಶಿಖೆ

ಇದು ಯಾವ ಕಲಾವಿದನ ನವ್ಯಚಿತ್ರವೂ ಅಲ್ಲ. ನಿಸರ್ಗ ಸೃಷ್ಟಿಸಿದ ಅಪರೂಪದ ನೋಟವೂ ಅಲ್ಲ. ಬೇಲಿಯ ಮೇಲಿದ್ದ ಕನ್ನಡಿ ಹಾವಿನ ಮೃತ ದೇಹವನ್ನು ಕೆಂಜಿರುವೆಗಳು ಮುತ್ತಿಕೊಂಡು ಆರಂಭಿಸಿದ ಸುಗ್ರಾಸ ಭೋಜನದ ದೃಶ್ಯ ಉರಿಯುವ ಬೆಂಕಿಯ ಹಾಗಿತ್ತು.

—ಪ. ರಾಮಕೃಷ್ಣಶಾಸ್ತ್ರಿ



## ಕೂಡಿಬಾಳ್ವೆಯ ಸಾರ್ಥಕ

ಪ್ರಕೃತಿಯಲ್ಲಿ ಸೂಜಿಗವೆಂಬಂತೆ ಹಲವಾರು ವೈಶಿಷ್ಟ್ಯಗಳನ್ನು ಕಾಣುತ್ತೇವೆ. ಅವುಗಳನ್ನು ಅಂತರಂಗದ ಅರಿವಿನ ಕಣ್ಣಿನಿಂದ ನೋಡಿದಾಗ ಮನಸು ಜಾಗೃತವಾಗುತ್ತದೆ. ಪಾಳು ಬಿದ್ದ ಕೋಟೆ, ಮಸೀದಿ, ಮಂದಿರ, ಗೋಡೆಗಳ ಮೇಲೆ ಇಲ್ಲವೆ ಕಲ್ಲುಬಂಡೆಗಳ ಮೇಲೆ ಅರಳಿ ಅಥವಾ ಆಲದ ಮರದ ಸಸಿಗಳು ಬೆಳೆಯುವುದನ್ನು ಕಾಣುತ್ತೇವೆ. ಇನ್ನೂ ವಿಶಿಷ್ಟವೆಂದರೆ ಒಂದು ಜಾತಿಯ ಮರದ ಪೊಟರೆಯಲ್ಲಿ ಮತ್ತೊಂದು ಜಾತಿಯ ಗಿಡಗಳು ಬೆಳೆದು ತಳುಕು ಹಾಕಿರುವುದನ್ನು ಕಾಣುತ್ತೇವೆ. ಅಪರೂಪವೆಂಬಂತೆ ಗಂಗಾವತಿಯಿಂದ 8 ಕಿ.ಮೀ. ಅಂತರದಲ್ಲಿರುವ ಮಲ್ಲಾಪುರ ಗ್ರಾಮದಿಂದ ರಂಗಾಪುರ ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ ಭತ್ತದ ಗದ್ದೆಯ ಬದುವಿನಲ್ಲಿ ಅರಳಿಮರದ ಒಡಲೊಳಗೆ ತಾಳೆಮರವೊಂದು ಆಕಾಶದೆತ್ತರಕ್ಕೆ ಬೆಳೆದು ನಿಂತಿದ್ದು, ಜಾತಿ ಜಾತಿಯೆಂದು ಬಡಿದಾಡುವ ಮಾನವನಿಗೆ ಕೂಡಿ ಬಾಳಿದರೆ ಸ್ವರ್ಗ ಸುಖವೆಂಬ ಪಾಠವನ್ನು ಪ್ರಕೃತಿ ಹೇಳುವಂತೆ ಕಾಣುತ್ತದೆ

—ಮೈಲಾರಪ್ಪ ಬೂದಿಹಾಳ
ಮುಗಿಲ ಹಕ್ಕಿ

